# ಕುವೆಂಪು ಮದುವೆ ಕರೆಯೋಲೆ

ಇದು ರಾಷ್ಟ್ರಕವಿ ಕುವೆಂಪು ಅವರ ವಿವಾಹದ ಆಮಂತ್ರಣ ಪತ್ರಿಕೆ. 77 ವರ್ಷಗಳ ಹಿಂದೆ ಇಂಗ್ಲಾದಿ ಮನೆಯಲ್ಲಿ ಕುವೆಂಪು ಅವರೇ ಸ್ವತಃ ಕುಳಿತು ಈ ಕರೆಯೋಲೆ ರೂಪಿಸಿದ್ದರು. ಇದು ಅಪೂರ್ವವಾಗಿದ್ದು, ಅತ್ಯಂತ ಸರಳವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಲಕ್ಷ್ಮೀದೇವಿ ಅವರ ಜೊತೆ ಮದುವೆ ನಿಶ್ಚಯವಾದ ನಂತರ ಮಾನಪ್ಪ ಅವರು ಸಣ್ಣ ವಿಷಯಕ್ಕಾಗಿ ಮದುವೆಯಾಗಲು ನಿರಾಕರಿಸಿದರಂತೆ. ನಂತರ ಕುವೆಂಪು ಅವರು ಸ್ನೇಹಿತ ಮಾನಪ್ಪ ಅವರನ್ನು ಕುಪ್ಪಳ್ಳಿಗೆ ಕರೆದುಕೊಂಡು ಹೋಗಿ ಗುಡ್ಡ (ಕವಿಶೈಲ)ದಲ್ಲಿ ಕುಳಿತು ಮದುವೆಗೆ ಒಪ್ಪಿಸಿದರಂತೆ. ಆಮೇಲೆ ಇಬ್ಬರೂ ಸ್ನೇಹಿತರು ಇಂಗ್ಲಾದಿ ಮನೆಗೆ ಬಂದು ಈ ಕರೆಯೋಲೆ ರೂಪಿಸಿದರು.

**-ವಿ.ಬಾಲಕೃಷ್ಣ ಶಿರ್ವ, ಕಿನ್ನಗೋಳಿ**


ಮಹನೀಯರೆ,

ಈಶ್ವರ ಸಂ॥ ಚೈತ್ರ ಬ. ೫ ತಾ. ೩೦—೪—'೩೭ ಶುಕ್ರವಾರ
ಪೂರ್ವಾಹ್ನ ಗಂಟೆ ೧೧-೩೦ ಕರ್ಕಾಟಕ ಲಗ್ನದಲ್ಲಿ
ನನ್ನ ಪುತ್ರ
**ಚಿ॥ ರಾ॥ ಮಾನಪ್ಪ**
ದಿವಂಗತ ಶ್ರೀ ಮರಿತೊಟ್ಟಲು ಕೃಷ್ಣಯ್ಯಗೌಡರ ಪುತ್ರಿ
**ಚಿ॥ ಸೌ॥ ಲಕ್ಷ್ಮೀದೇವಿ**
ಇವರಿಗೂ
**ಮತ್ತು** ರಾತ್ರಿ ಗಂಟೆ ೧೨-೧೫ ಮಕರಲಗ್ನದಲ್ಲಿ
ನನ್ನ ಪುತ್ರಿ
**ಚಿ॥ ಸೌ॥ ಹೇಮಾವತಿ**
ದಿವಂಗತ ಶ್ರೀ ಕುಪ್ಪಳಿ ವೆಂಕಟಪ್ಪಗೌಡರ ಪುತ್ರ
**ಚಿ॥ ರಾ॥ ಕೆ. ವಿ. ಪುಟ್ಟಪ್ಪ**
ಇವರಿಗೂ
ಮರಿತೊಟ್ಟಲು ಮತ್ತು ದೇವಂಗಿಯಲ್ಲಿ ನಡೆಯುವ ವಿವಾಹಗಳಿಗೆ ತಾವು ಇಷ್ಟಮಿತ್ರರೊಡನೆ
ದಯಮಾಡಿ ಬಂದು ನನ್ನ ಮನಸ್ಸಂತೋಷಪಡಿಸಬೇಕಾಗಿ ಕೋರುತ್ತೇನೆ.
ತಮ್ಮ ಸ್ನೇಹಾಭಿಲಾಷಿ,
**ದೇವಂಗಿ ರಾಮಣ್ಣಗೌಡ.**



# ಈ ಹೋತಕ್ಕೆ 2 ಲಕ್ಷ!

ಈ ಹೋತಕ್ಕೆ 2 ಲಕ್ಷ ರೂಪಾಯಿ ಬೆಲೆ! ಇಲ್ಲಿಯ ಧವಳೇಶ್ವರ ಗ್ರಾಮದ ರೈತ ಶಿವಲಿಂಗಪ್ಪ ಮುತ್ತಪ್ಪ ಪಟ್ಟಣಶೆಟ್ಟಿಯವರು ಸಾಕಿದ ಒಂದು ವರ್ಷದ ಹೋತವನ್ನು ಖರೀದಿಸಲು ಗಿರಾಕಿಗಳ ಮಧ್ಯೆ ಪೈಪೋಟಿ ನಡೆದಿದೆ. ಒಬ್ಬರು ರೂ.1.50 ಲಕ್ಷಕ್ಕೆ ಬೇಡಿದರೆ, ಇನ್ನೊಬ್ಬರು 2 ಲಕ್ಷ ರೂಪಾಯಿ ಕೊಟ್ಟು ಖರೀದಿಸಲು ಮುಂದಾಗಿದ್ದಾರೆ.

ಈ ಹೋತದ ತಲೆಯ ಮೇಲೆ ಬಿಳಿ ಬಣ್ಣದ ಅರ್ಧ ಚಂದ್ರಾಕೃತಿ ಹೋಲುವ ಧಾರ್ಮಿಕ ಚಿಹ್ನೆ ಇರುವುದರಿಂದ ಮುಸ್ಲಿಮರು ಖರೀದಿಸಲು ಪೈಪೋಟಿ ನಡೆಸಿದ್ದಾರೆ. ಬಕ್ರೀದ್ ಹಬ್ಬ ಸಮೀಪಿಸುತ್ತಿರುವುದರಿಂದ ಕುರಿ, ಮೇಕೆಗಳ ಮಾರಾಟ ಬಹಳ ಜೋರಾಗಿರುತ್ತದೆ.

**-ಸುವರ್ಣಜ್ಯೋತಿ, ಬಾಗಲಕೋಟ**



# ವಿಭೂತಿಯಲ್ಲಿ ಅರಳಿದ ಕಲೆ

ಹಣೆಗೆ ಹಚ್ಚಿಕೊಳ್ಳುವ ವಿಭೂತಿ, ಕಲಾವಿದ ಮಾರ್ಕಂಡೇಯ ಅವರ ಕೈಯಲ್ಲಿ ಸುಂದರ ಶಿಲ್ಪಗಳಾಗಿ ರೂಪ ಪಡೆಯುತ್ತದೆ. ಸಂಗೀತದ ಗೀಳು ಹಚ್ಚಿಕೊಂಡಿರುವ ಮಾರ್ಕಂಡೇಯ ಕೈಗಳಲ್ಲಿ ಹಾರ್ಮೋನಿಯಂ, ಕೊಳಲು, ತಬಲಾ, ಖಡ್ಗ, ಪಿಸ್ತೂಲ್, ಸರಪಳಿ, ಕರ್ನಾಟಕ ನಕ್ಷೆ, ಕನ್ನಡಿಗರ ಕಣ್ಮಣಿ ವರನಟ ಡಾ.ರಾಜ್ ಕುಮಾರ್ ಮೂರ್ತಿ ವಿಭೂತಿಯಲ್ಲಿ ಬಲು ಚಂದವಾಗಿ ಮೈತಳೆದಿವೆ. ಒಂದೇ ಸಾಬೂನಿನಲ್ಲಿ ಬುದ್ಧ, ಬಸವ, ಗಾಂಧಿ, ಮೂರು ಮಂಗಗಳ ಮೂರ್ತಿಗಳನ್ನು ತಯಾರಿಸಿದ್ದು, ನೋಡುಗರ ಮನ ಸೆಳೆಯುತ್ತವೆ.

ದೈಹಿಕ ಅಂಗವೈಕಲ್ಯ ಹೊಂದಿರುವ ಮಾರ್ಕಂಡೇಯ ಪಲಮಾರಿ ಸತತ ಪರಿಶ್ರಮದ ಬೆನ್ನು ಹತ್ತಿ, ತಾಳವಾದ್ಯದ ಆಕರ್ಷಕ ಆಕೃತಿಗಳನ್ನು ನಿರ್ಮಿಸಿ ಕಲಾ ಲೋಕದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸುತ್ತಿದ್ದಾರೆ. ಇವರು ತಯಾರಿಸಿದ ಬಳಪದ ಕಲಾಕೃತಿಗಳು, ವಿಭೂತಿಯ ಚಂದದ ಮೂರ್ತಿಗಳು, ಸಾಬೂನಿನ ಕಲಾಕೃತಿಗಳು ಹಲವೆಡೆ ಪ್ರದರ್ಶನ ಕಂಡು ಕಲಾ ರಸಿಕರ ಮನ ಗೆದ್ದಿವೆ.

**ಚಿತ್ರ- ಬರಹ: ಮಲ್ಲಿಕಾರ್ಜುನ ರಾಜನಾಳ, ಬಾಗಲಕೋಟ**